**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**
**ಪೀಠಾಸೀನ ಕೊಳ್ಳೇಗಾಲ**

**SPL.C. 5080/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಮನೋಹರ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಚಿಕ್ಕಮಾದಯ್ಯ | 10.04.2026 |
| **ವಯಸ್ಸು** | : | 37 ವರ್ಷ | |
| **ವೃತ್ತಿ** | : | ಪೊಲೀಸ್ ಪೇದೆ, ಕೊಳ್ಳೇಗಾಲ ಗ್ರಾಮಾಂತರ ಪೊ.ಠಾಣೆ | **ಪ್ರಾ.ಸಾಃ 16** |
| **ವಾಸ ಸ್ಥಳ** | : | ಕೊಳ್ಳೇಗಾಲ | **ಚಾ.ಸಾಃ 44** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು 2022 ರಿಂದ ಪೊಲೀಸ್ ಪೇದೆ ಆಗಿ ಕೊಳ್ಳೇಗಾಲ ಗ್ರಾಮಾಂತರ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.**

ದಿಃ 16.12.2024 ರಂದು ತನಿಖಾಧಿಕಾರಿಗಳ ಆದೇಶದಂತೆ ಚಾಮರಾಜನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಮೃತ ಪವಿತ್ರಳ ಶವ ತನಿಖಾ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದು ವೀಡಿಯೋ ಚಿತ್ರೀಕರಣವನ್ನು ಮಾಡಿರುತ್ತೇನೆ. ನನ್ನ ಮೊಬೈಲ್ ಮೂಲಕ ಭಾವಚಿತ್ರಗಳನ್ನು ತೆಗೆದು ವೀಡಿಯೋ ಚಿತ್ರೀಕರಣವನ್ನು ಮಾಡಿರುತ್ತೇನೆ.

ದಿಃ 17.12.2024 ರಂದು ತನಿಖಾಧಿಕಾರಿಗಳು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿದ್ದು, ಆ ಸಮಯದಲ್ಲಿ ನನ್ನ ಮೊಬೈಲ್ ಮೂಲಕ ಭಾವಚಿತ್ರಗಳನ್ನು ತೆಗೆದು ವೀಡಿಯೋ ಚಿತ್ರೀಕರಣವನ್ನು ಮಾಡಿರುತ್ತೇನೆ. ಭಾವಚಿತ್ರಗಳನ್ನು ಈಗಾಗಲೇ ನಿಪಿ 2 ರಿಂದ 5 ಮತ್ತು ನಿಪಿ 8 ರಿಂದ 16 ಎಂದು ಗುರುತಿಸಲಾಗಿರುತ್ತದೆ. ಮಹಜರ್ ಅನ್ನು ನಿಪಿ 6 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯು ಸಹಿಯನ್ನು ನಿಪಿ

6(ಪಿ) ಎಂದು ಗುರುತಿಸಲಾಯಿತು. ವಿಡಿಯೋ ದೃಶ್ಯಾವಳಿಗಳನ್ನು ಮತ್ತು ಭಾವಚಿತ್ರಗಳನ್ನು ಠಾಣಾ ಕಂಪ್ಯೂಟರ್ ಗೆ ವರ್ಗಾಯಿಸಿ ನಂತರ ಡಿವಿಡಿಗೆ ವರ್ಗಾಯಿಸಿರುತ್ತೇನೆ. ಡಿವಿಡಿಯನ್ನು ನಿಪಿ 38 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63 9(4)(ಪಿ) ರಂತೆ ದೃಡೀಕರಣವನ್ನು ನೀಡಿರುತ್ತೇನೆ. ದೃಡೀಕರಣವನ್ನು ನಿಪಿ 39 ಮತ್ತು 40 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 39(ಎ) ಮತ್ತು 40(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಎಂ ಎಂ ಕೆ ವಕೀಲರಿಂದ**

ನನಗೆ ಭಾವಚಿತ್ರಗಳನ್ನು ತೆಗೆಯಲು ಮತ್ತು ವೀಡೀಯೋ ಚಿತ್ರೀಕರಣ ಮಾಡಲು ಇಲಾಖೆಯಿಂದ ತರಬೇತಿ ಆಗಿರುತ್ತದೆ. ನಾನು ಯಾವುದೇ ವೀಡಿಯೋ ಚಿತ್ರೀಕರಣಗಳನ್ನು ಮಾಡಿಲ್ಲ ಮತ್ತು ಭಾವಚಿತ್ರಗಳನ್ನು ತೆಗೆದಿಲ್ಲ ತನಿಖಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ, ಮಹಜರ್ ಗೆ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ **39** ಮತ್ತು **40** ರಂತೆ ಸುಳ್ಳು ದೃಡೀಕರಣಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ